ಕೃಷಿ ಇಲಾಖೆಯಲ್ಲಿ ಹಾಲಿ ಇರುವ ಖಾಲಿ ಹುದ್ದೆಗಳ ಬಗ್ಗೆ.

೮೨೪ (ಎ). ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಕೃಷಿ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕೃಷಿ ಇಲಾಖೆಯಲ್ಲಿ ಹಾಲಿ ಇರುವ ಖಾಲಿ ಹುದ್ದೆಗಳು ಎಷ್ಟು ?

ಆ) ಮೇಲ್ಕಂಡ ಹುದ್ದೆಗಳಿಗೆ ವರ್ಗಾಂಬಡ್ತಿಯಂನ್ನು ಯಾವಾಗ ಕೊಡಲಾಗುವುದು ?

ಇ) ಈ ಹುದ್ದೆಗಳು ಎಷ್ಟು ತಿಂಗಳುಗಳಿಂದ ಖಾಲಿ ಇವೆ ?

ಈ) ಒಂದನೇ ದರ್ಜೆಯಿಂದ ವರ್ಗಾಂಬಡ್ತಿ ಹೊಂದುವ ವ್ಯಕ್ತಿಗಳ ಮತ್ತು ಹುದ್ದೆಗಳ ಹೆಸರನ್ನು ತಿಳಿಸುವುದು.

ಶ್ರೀ ಬಸವರಾಜ್ ಪಟೇಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕಾ ರಾಜ್ಯ ಸಚಿವರು).—

ಅ) ರಾಜ್ಯದಲ್ಲಿ ಕೃಷಿ ಇಲಾಖೆಯಲ್ಲಿ ಹಾಲಿ ಇರುವ ಖಾಲಿ ಹುದ್ದೆಗಳು ಒಟ್ಟು ೨,೦೧೦.

ಆ) ಮೇಲ್ಕಂಡ ೨,೦೧೦ ಖಾಲಿ ಹುದ್ದೆಗಳ ಪೈಕಿ ೧೯೫ ಪತ್ರಾಂಕಿತ ಹುದ್ದೆಗಳು ೪೦ ಪತ್ರಾಂಕಿತ ವಲ್ಲದ ಹುದ್ದೆಗಳು ಬಡ್ತಿಯಿಂದ ತುಂಬಬೇಕಾದ ಹುದ್ದೆಗಳಾಗಿವೆ. ಈ ಹುದ್ದೆಗಳನ್ನು ಶೀಘ್ರವಾಗಿ ಬಡ್ತಿಕೊಟ್ಟು ತುಂಬಲಾಗುವುದು.

ಇ) ಈ ಖಾಲಿ ಹುದ್ದೆಗಳಲ್ಲಿ ಕೆಲವು ಹುದ್ದೆಗಳು ೩–೪ ತಿಂಗಳುಗಳಿಂದಲೂ, ಇನ್ನೂ ಕೆಲವು ಹುದ್ದೆಗಳು ೮ ರಿಂದ ೧೨ ತಿಂಗಳುಗಳಿಂದಲೂ ಖಾಲಿ ಇವೆ.

ಈ) ಒಂದನೇ ದರ್ಜೆಯಿಂದ ವರ್ಗಾಂಬಡ್ತಿ ಕೊಡಲು ಪರಿಗಣಿಸಲಾಗುವ ಅಧಿಕಾರಿಗಳ ಮತ್ತು ಹುದ್ದೆಗಳ ಹೆಸರು ಈ ಕೆಳಕಂಡಂತಿವೆ.

ಸಂಖ್ಯೆ	ಒಂದನೇ ದರ್ಜೆ ಅಧಿಕಾರಿಗಳು	ಬಡ್ತಿ ಪಡೆಯುವ ಹುದ್ದೆಯ ಪದನಾಮ
೧	೨	೩
೧	ಡಾ॥ ಸ್ವಾಮಿರಾವ್ (ಉಪ ಕೃಷಿ ನಿರ್ದೇಶಕರು).	ತೆರವಾದ ಹುದ್ದೆ
೨	ಶ್ರೀ ಕೆ. ಆರ್. ವಂಲ್ಲಪ್ಪ (ಉಪ ಕೃಷಿ ನಿರ್ದೇಶಕರು).—	,,
೩	ಶ್ರೀ ಪಿ.ಕೆ. ಚಂದ್ರಶೇಖರಯ್ಯ (ಸಹಾಯಕ ಕೃಷಿ ನಿರ್ದೇಶಕರು)	,,
೪	ಶ್ರೀ ಸಿ.ವಿ. ಜವಳಿ (ಸಹಾಯಕ ಕೃಷಿ ನಿರ್ದೇಶಕರು)	,,
೫	ಶ್ರೀ ಟಿ. ಅಣಯ್ಯ ಶೆಟ್ಟಿ (ಸಹಾಯಕ ಕೃಷಿ ನಿರ್ದೇಶಕರು)	,,
೬	ಶ್ರೀ ಎಂ.ಎಲ್. ಜಗನಾಥ್ (ಸಹಾಯಕ ಕೃಷಿ ನಿರ್ದೇಶಕರು)	,,
೭	ಶ್ರೀ ಹೆಚ್.ವಿ. ದೇವದಾರಪ್ಪಗೌಡ (ಸಹಾಯಕ ಕೃಷಿ ನಿರ್ದೇಶಕರು)	,,
೮	ಶ್ರೀ ಕೊವೇಶ ಚಾರ್ಯ, ಆಡಳಿತಾಧಿಕಾರಿಗಳು	,,

ಹರಪನ ಹಳ್ಳಿಯಲ್ಲಿರುವ ಬಾಲಕಿಯರ ಸರಕಾರಿ ಪ್ರೌಢ ಶಾಲೆಯ ಕಟ್ಟಡದ ಕೆಲಸವನು ಪೂರ್ಣ ಗೊಳಿಸುವ ಬಗ್ಗೆ.

೮೬೨. ಶ್ರೀ ಬಿ. ಹೆಚ್. ಯಂಕಾನಾಯ್ಕ (ಹರಪನಹಳ್ಳಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿ ಒಂದೇ ಬಾಲಕಿಯರ ಸರ್ಕಾರಿ ಪ್ರೌಢಶಾಲೆ ಇರುವುದು ನಿಜವೇ ?

ಆ) ಸದರಿ ಶಾಲೆಯು ತೀರಾ ಚಿಕ್ಕದಾಗಿದ್ದು ಸ್ಥಳದ ಅಭಾವ ಇರುವುದು ನಿಜವೇ ?

ಇ) ಸದರಿ ಪ್ರೌಢಶಾಲೆಗಾಗಿ ಮಂಜೂರಾಗಿರುವ ಕಟ್ಟಡವನ್ನು ಮೂಲ ನಕ್ಷೆಯಂ ಪ್ರಕಾರ ಪೂರ್ಣಗೊಳಿಸದೆ ಹಣದ ಅಭಾವದಿಂದ ಕೆಲಸವನ್ನು ಅರ್ಧಕ್ಕೆ ನಿಲ್ಲಿಸಿರುವುದು (೩ ಕೊಠಡಿಗಳನ್ನು ಮಾತ್ರ ನಿರ್ಮಿಸಿ) ನಿಜವಲ್ಲವೇ ?

ಈ) ಹಾಗಿದ್ದಲ್ಲಿ ಮೂಲ ನಕ್ಷೆಯ ಪ್ರಕಾರ ಪೂರ್ಣಗೊಳಿಸಲು ಹಣವನ್ನು ತಕ್ಷಣ ಮಂಜೂರು ಮಾಡಲಾಗುವುದೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ನಿಜ.

ಆ) ನಿಜ.

ಇ) ಐದು ಕೊಣೆಗಳಂ ಪೂರ್ಣವಾಗಿದ್ದು ಒಂದು ಕೋಣೆ ಮತ್ತು ಕಾಂಪೌಡು ಮಾತ್ರ ಉಳಿದಿದೆ.

ಈ) ಇದಕ್ಕಾಗಿ ೧೯೮೬-೮೭ರಲ್ಲಿ ೧.೫೦ ಲಕ್ಷ ಹಣ ಒದಗಿಸಿದೆ.

ಕೋಲಾರ ಜಿಲ್ಲೆಯಲ್ಲಿ ಮಂಜೂರಾಗಿರುವ ಪ್ರಾಥಮಿಕ ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳ ಉಪಾಧ್ಯಾಯರ ಹುದ್ದೆಗಳ ಬಗ್ಗೆ.

೮೮೬. ಶ್ರೀ ಹೆಚ್. ಬಿ. ದ್ಯಾವೀರಪ್ಪ (ಮಾಲೂರು).—ಮಾನ್ಯ ಶಿಕ್ಷಣ ಮಂತ್ರಿಯಂವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಂವಿಟ್ಟು ಉತ್ತರಿಸುವರೇ ?

ಅ) ಕೋಲಾರ ಜಿಲ್ಲೆಯಲ್ಲಿ ಮಂಜೂರಾಗಿರುವ ಪ್ರಾಥಮಿಕ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳ ಉಪಾಧ್ಯಾಯರ ಸಂಖ್ಯೆ ಎಷ್ಟು (ತಾಲ್ಲೂಕುವಾರು) ?

ಆ) ೧೯೮೬-೮೭ನೇ ವರ್ಷದಲ್ಲಿ ಕೆಲಸ ಮಾಡುತ್ತಿದ್ದ ಹಾಗೂ ಖಾಲಿ ಇದ್ದ ಉಪಾಧ್ಯಾಯರ ಹುದ್ದೆಗಳೆಷ್ಟು ?

ಇ) ಖಾಲಿ ಇರುವ ಹುದ್ದೆಗಳನ್ನು ಬರುವ ವರ್ಷ ಅಂದರೆ ೧೯೮೭-೮೮ ರಿಂದ ನೇಮಕಾತಿ ಮಾಡಲಾಗುವುದೇ ?